# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.204/ 2017

ಸಿಡಬ್ಲ್ಯೂ ಃ 1
ಪಿಡಬ್ಲ್ಯೂ ಃ 3

**ದಿನಾಂಕಃ 30-11-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | - | ಅಮಲಪ್ಪ |
| ತಂದೆಯ ಹೆಸರು | - | ಭೀಮಪ್ಪ |
| ವಯಸ್ಸು | -? | 57 ವರ್ಷ |
| ಉದ್ಯೋಗ | - | ಸಮಾಜ ಸೇವೆ |
| ವಾಸಸ್ಥಳಃ | - | ಕಲಬುರಗಿ. |

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಕಲಬುರಗಿಯಲ್ಲಿ ಸಂತ ಕಬೀರ್ ದಾಸ್ ಶಿಕ್ಷಣ ಸಂಸ್ಥೆ ಇರುತ್ತದೆ. ಅದರ ಅಡಿಯಲ್ಲಿ ಶ್ರೀ ಶಿವಯೋಗಿ ಸ್ಮಾರಕ ಪೌಢ್ರ ಶಾಲೆ ಕುರಿಕೋಟ ಮತ್ತು ಕಲಬುರಗಿ ನಗರದ ಜಿ ಡಿ ಎ ಗಂಗಧಾರ ಭಕ್ತಪ್ರಭು ಪ್ರೌಢ ಶಾಲೆ ಅದರಂತೆ ಯಾದಗಿರಿಯ ಸ್ಟೇಷನ್ ಏರಿಯಾದಲ್ಲಿ ಬ್ಲೂ ಸ್ಟಾರ್ ಕಲಾ ಮಹಾವಿದ್ಯಾಲಯ ನಡೆಯುತ್ತಿದ್ದೆ ಅದರ ಅಡಿಯಲ್ಲಿ ವಸತಿ ಶಾಲೆಗಳು ನಡೆಯುತ್ತವೆ. ಕಲಬುರಿಗಿಯ ಶ್ರೀ. ಚನ್ನವೀರ ಶಿವಯೋಗಿ ಸ್ಮಾರಕ ಪೌಢ್ರ ಶಾಲೆ ಮತ್ತು ಗಂಗಧಾರ ಭಕ್ತಪ್ರಭು ಪ್ರೌಢ ಶಾಲೆ ಈ ಎರಡು ಶಾಲೆಗಳ 8 ಸಿಬ್ಬಂದಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ 1 ನೇ ಆರೋಪಿ ಇವರು ಮಾನಸಿಕವಾಗಿ, ಆರ್ಥಿಕವಾಗಿ ದೌರ್ಜನ್ಯ ನೀಡಿದ್ದರು. ಕುರಿಕೋಟ ಶಾಲೆಯಲ್ಲಿ ದೈಹಿಕ ಶಿಕ್ಷಕರಾದ ಪ್ರಕಾಶ ಪ್ರಸಾದ ಎನ್ನುವವರು ಈ ಎಲ್ಲಾ 7 ಜನರನ್ನು ನನ್ನ ಬಳಿ ಕರೆದುಕೊಂಡು ಬಂದು ಸಂಸ್ಥೆಯ ಅಧ್ಯಕ್ಷರಾದ 1 ನೇ ಆರೋಪಿತನ ವಿರುದ್ಧ ನನಗೆ ದೂರು ನೀಡಿರುತ್ತಾರೆ. ಅದರಂತೆ ಬ್ಲೂ ಸ್ಟಾರ್ ಕಲಾ ಮಹಾವಿದ್ಯಾಲಯ ಯಾದಗಿರಿಯಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದ ಚಾಸಾ-4 ರವರು ಸದರಿ ವಿದ್ಯಾಲಯದಲ್ಲಿ ಕಲಿಯುತ್ತಿದ್ದ ಮಕ್ಕಳ ಜಾತಿ ಪ್ರಮಾಣ ಪತ್ರಗಳನ್ನು ಮತ್ತು ನಕಲು ವರ್ಗಾವಣೆ ಪ್ರಮಾಣ ಪತ್ರಗಳನ್ನು ನನಗೆ ತಂದುಕೊಟ್ಟರು ಅವುಗಳನ್ನು ನಾನು ನೋಡಲಾಗಿ ಜಾತಿ ಪ್ರಮಾಣ ಪತ್ರದಲ್ಲಿ ಹೆಸರು, ತಂದೆಯ ಹೆಸರು, ಜಾತಿ, ಊರು, ಕ್ರಮ ಸಂಖ್ಯೆ ಕೋರಿಕೆ ಸಂಖ್ಯೆ ಇವುಗಳನ್ನು ಕಟ್

ಪೆಸ್ಟ್ ಮಾಡಿ ತಹಶೀಲ್ದಾರರು ನೀಡಿದಂತೆ ಅಂಟಿಸಿದನ್ನು ನಾನು ನೋಡಿರುತ್ತೇನೆ. ಅವುಗಳನ್ನು ಹಂಪಿ ವಿಶ್ವವಿದ್ಯಾಲಯಕ್ಕೆ 1 ಮತ್ತು 2 ನೇ ಆರೋಪಿತರು ಕಳುಹಿಸಿ ಸದರಿ ವಿಶ್ವವಿದ್ದಾಲಯದಿಂದ ವಿದಾ್ಯರ್ಥಿಗಳಿಗೆ ನೀಡಲು ಪಟ್ಟ ಶೀಷ್ಯವೇತನವನ್ನು 1 ಮತ್ತು 2 ನೇ ಆರೋಪಿತರು ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದರು. ಅದರಂತೆ ರಾಹುಲ್ ಎಸ್.ಸಿ , ಎಸ್.ಟಿ ವಸತಿ ನಿಲಯ, ಯಾದಗಿರಿಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಮತ್ತು ವರ್ಗಾವಣೆ ಪ್ರಮಾಣ ಪತ್ರಗಳನ್ನು ಸಲ್ಲಿಸಿ ವಿದ್ಯಾರ್ಥಿಗಳನ್ನು ಸದರಿ ವಸತಿ ನಿಲಯಕ್ಕೆ ಪ್ರವೇಶ ನೀಡಿದ್ದೇವೆ ಎಂದು ಹೇಳಿ ರೂ.2 ಲಕ್ಷ 59 ಸಾವಿರ ಹಣವನ್ನು ಸ್ವಂತಕ್ಕೆ ಉಪಯೋಗ ಮಾಡಿಕೊಂಡಿರುತ್ತಾರೆ. ಅದೆಲ್ಲ ತಿಳಿದು ನಾನು ದಿನಾಂಕಃ 04.02.2013 ರಂದು ಮಾನ್ಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಬೆಂಗಳೂರು ರವರಿಗೆ 21 ವಿದಾರ್ಥಿಗಳ ಸುಳ್ಳು ಜಾತಿ ಪ್ರಮಾಣ ಪತ್ರ ಮತ್ತು 10 ವಿದ್ಯಾರ್ಥಿಗಳ ದ್ವಿಪ್ರತಿ ವರ್ಗಾವಣೆ ಪ್ರಮಾಣ ಪತ್ರ ಇವುಗಳನ್ನು ಸಲ್ಲಿಸಿ ಆರೋಪಿ 1 ಮತ್ತು 2 ರವರ ವಿರುದ್ಧ ನಾನು ದೂರನ್ನು ನೀಡಿದ್ದೆ. ಅದರಂತೆ ಕಲಬುರಗಿಯ ನಾಗರೀಕ ಹಕ್ಕು ಜಾರಿನಿರ್ದೇಶನಾಲಯ ತನಿಖಾಧಿಕಾರಿಗಳಾದ ಪಿ.ಎಸ್.ಐ ಶ್ರೀಮತಿ ಲಾಲ್‌ಭೀ ರವರು ನನ್ನ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅದು ಆದ ನಂತರ ದಿನಾಂಕಃ 26.11.2015 ರಂದು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಆಗಿತ್ತು. ಅದೇ ದಿನ ಬೆಳಗ್ಗೆ 10 ಗಂಟೆಯಿಂದ 11 ಗಂಟೆಯ ವರೆಗೆ ನಗರ ಪೊಲೀಸ್ ಠಾಣೆಯವರು ಸ್ಟೇಷನ್ ಏರಿಯಾದಲ್ಲಿ ಇರುವ ಬ್ಲೂ ಸ್ಟಾರ್ ಕಲಾ ಮಹಾವಿದ್ಯಾಲಯ ಯಾದಗಿರಿಗೆ ನನ್ನನ್ನು ಕರೆದುಕೊಂಡು ಹೋಗಿ, ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ದಿನಾಂಕಃ 27.11.2015 ರಂದು ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ನಂತರ ನಾನು ಮರುಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಸುಧಾರ್ಶನ್ ಚನ್ನಯ್ಯಸ್ವಾ ಮಿಯವರು ನನಗೆ ಎಲ್ಲಾ ದಾಖಲಾತಿಗಳನ್ನು ನನಗೆ ಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ. ಅದರಲ್ಲಿ ಸುಧಾರ್ಶನ್ ರವರು ನನ್ನ ಕಣ್ಣುಎದುರಲ್ಲಿ ಪ್ರಭಾರಮುಖ್ಯಪಾಧ್ಯಯರಾದ ಗೀತಾಪಾಂಡುರಂಗ ಈ ಕೃತ್ಯ ಎಸಗುತ್ತಿದ್ದರು ಈ ರೀತಿಯಾಗಿ ಎಸ್.ಸಿ. ಎಸ್.ಟಿ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಬಾರದೆಂದು ಅವರಿಗೆ ಹೇಳಿದರು, ಅದಕ್ಕಾಗಿ ಅವರನ್ನು ಸಂಸ್ಥೆಯ ಅಧ್ಯಕ್ಷರಾದ 1 ನೇ ಆರೋಪಿತನು ಶಾಲೆಯಿಂದ ಹೊರಹಾಕಿದರು. ಜಾತಿ ಪ್ರಮಾಣ ಪತ್ರದಲ್ಲಿ ಕಂಪ್ಯೂಟರ್ ಮೂಲಕ ಕಟ್ ಮಾಡಿ ಪೆಸ್ಟ್ ಮಾಡಿದರು. ಹಿಂದೆ ಕಲಿತು ಹೋದ ವಿದ್ಯಾರ್ಥಿಗಳ ಜಾತಿ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರಗಳಲ್ಲಿ ಬೇರೆಯವರ ಪೋಟೋಗಳನ್ನು ಅಂಟಿಸಿದ್ದರು. ಈ ರೀತಿಯಾಗಿ ಅವರು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಸರಕಾರಕ್ಕೆ ಮತ್ತು ಸರಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುತ್ತಾರೆ. ಅದೇ ರೀತಿ ವಿದ್ಯಾರ್ಥಿಗಳಿಗೂ ಸಹ ಅನ್ಯಾಯ

ಮಾಡಿರುತ್ತಾರೆ. ಸಾಕ್ಷಿಯು ಮೂರುಪುಟವುಳ್ಳ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುನ್ನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿರುತ್ತದೆ. ಉಳಿದ ದಾಖಲೆಗಳು ನೆರಳಚ್ಚು ಪ್ರತಿಗಳು ಇರುತ್ತವೆ ಆದ್ದರಿಂದ ಮೂಲ ದಾಖಲೆಗಳನ್ನು ಹಾಜರುಪಡಿಸಲು ಹಿರಿಯ ಸ.ಸ ರವರು ಕಾಲಾವಕಾಶವನ್ನು ಕೋರಿರುತ್ತಾರೆ. ಸದರಿ ದಾಖಲೆಗಳನ್ನು ಹಾಜರುಪಡಿಸಲು ಸಮಯವನ್ನು ನೀಡಲಾಯಿತು.

ಈ ಹಂತದಲ್ಲಿ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.